## ನಾನೂ ನೀನೂ ಜೋಡಿ!

ಈಗ ಪೇಟೆಯಲ್ಲೆಲ್ಲ ಮಾವಿನ ಹಣ್ಣಿನದ್ದೇ ಭರಾಟೆ. ಮೊನ್ನೆ ಹಾನಗಲ್ ತಾಲ್ಲೂಕಿನ ಮಾವಿನ ತೋಪೊಂದಕ್ಕೆ ಹೋಗಿದ್ದೆ. ಇನ್ನೂ ಕಾಯಿಗಳು ಗಿಡದಲ್ಲಿ ತೊನೆದಾಡುತ್ತಿದ್ದವು. ನೋಡುತ್ತ ಹೋದಂತೆ ಗಿಡವೊಂದರಲ್ಲಿದ್ದ ಜೋಡಿ ಕಾಯಿಗಳು ಆಕರ್ಷಿಸಿದವು. ಒಂದಕ್ಕೊಂದು ತದ್ರೂಪಿ ಅವಳಿಗಳಂತೆ ಬದಿಯಲ್ಲಿ ಅಂಟಿಕೊಂಡಿದ್ದವು. ಅದನ್ನು ಕಂಡು ಜೊತೆಯಲ್ಲಿದ್ದವರು ಅಚ್ಚರಿಗೊಂಡರು.

ಪ್ರಕಾಶ. ಎಸ್.ಮನ್ನಂಗಿ





## ಅತ್ಯುತ್ತಮ ಮಾನವ ಸ್ನೇಹಿ ಪ್ರಾಣಿ

ರಕ್ತ ಹೀರುವುದರಲ್ಲಿ ಜಿಗಣೆಗಳಿಗೆ ಸಾಟಿಯೇ ಇಲ್ಲ. ಆದರೆ ಇದೊಂದು ಚಿಕಿತ್ಸೆ ಎಂಬ ಸಂಗತಿ ತಿಳಿದವರ ಸಂಖ್ಯೆ ಬಹಳ ಕಡಿಮೆ! ನಿಮಗೆ ಗೊತ್ತೇ? ನಮ್ಮ ದೇಹದ ಹಲವು ವ್ಯಾಧಿಗಳನ್ನು ಗುಣಪಡಿಸುವ ಸಾಮರ್ಥ್ಯ ಈ ಜಿಗಣೆಗಳಿಗೆ ಇದೆ. 'ಅತ್ಯುತ್ತಮ ಮಾನವ ಸ್ನೇಹಿ ಪ್ರಾಣಿ' ಎಂದು ಜಿಗಣೆಯ ಹೆಸರನ್ನು ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ದಾಖಲಿಸಲಾಗಿದೆ.

ಡಾ. ಗುರಲಿಂಗಪ್ಪ ಅಂಕದ, ವಿಜಯಪುರ

## ತೆರೆದಿದೆ ಮುಳ್ಳಿನ ಬಾಗಿಲು..!

ಅಗಸಿ ಬಾಗಿಲು, ಕೋಟೆ ಬಾಗಿಲು, ಮಹಾದ್ವಾರದ ಬಾಗಿಲು ಎಂದು ಕರೆಯಿಸಿಕೊಳ್ಳುವ ಇತಿಹಾಸ ಕಾಲದ ಬಾಗಿಲು ಇಂದು ಅವಸಾನದ ಅಂಚಿನಲ್ಲಿವೆ. ಬೀದರ್‌ನ ಕೋಟೆಯ ಕಬ್ಬಿಣದ ಮುಳ್ಳು ಬಾಗಿಲು ಕಲಾತ್ಮಕ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಶತ್ರುಗಳು ದಾಳಿ ಮಾಡಿದಾಗ ಬಾಗಿಲನ್ನು ಆನೆಯ ಮತ್ತು ಒಂಟೆಯ ಬಲವನ್ನು ಬಳಸಿ ತೆಗೆಯುತ್ತಿದ್ದರು. ಆಗ ಕಬ್ಬಿಣದ ಮುಳ್ಳುಗಳು ಆನೆ ಮತ್ತು ಒಂಟೆಗಳ ತಲೆಗೆ ಚುಚ್ಚುತ್ತಿದ್ದರಿಂದ ಶತ್ರುಗಳಿಗೆ ಬಾಗಿಲು ತೆರೆಯಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಭದ್ರ ಬಾಗಿಲುಗಳನ್ನು ತಮ್ಮ ಕೋಟೆಗೆ ಅಳವಡಿಸಿದ ಬಿದರಿನ ನವಾಬ್‌ರು ಇಂದಿಗೂ ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಸೀಸಂ, ಲಕಡಿ ಮತ್ತು ಉಕ್ಕಿನಿಂದ ಬಾಗಿಲುಗಳನ್ನು ನಿರ್ಮಿಸಿದ್ದಾರೆ. ಪ್ರವಾಸಿಗರು ಈ ಬಾಗಿಲುಗಳನ್ನು ಹಾಳಾಗದಂತೆ ಕಾಪಾಡಿಕೊಳ್ಳಬೇಕು.

ಶೃತಿ ಮೋಪಗಾರ, ವಿಜಯಪುರ

